**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,</u>**

**<u>ಕೃಷ್ಣರಾಜನಗರ</u>**

**<u>ಸಿ. ಸಿ. 71/2026</u>**

**ಫಿರ್ಯಾದಿ** ಃ ಸರ್ಕಾರದ ಪರ ಕೆ.ಆರ್.ನಗರ ಪೋಲೀಸ್ ಠಾಣೆ

ಃ ವಿರುದ್ಧ ಃ

**ಆರೋಪಿ** ಃ 1. ಸಿದ್ದಯ್ಯ ಬಿನ್ ಲೇಟ್ ಲಕ್ಕಯ್ಯ , **55** ವರ್ಷ,
ವಾಸ ಃ ಸಿದ್ದಾಪುರ ಗ್ರಾಮ,
ಕೆ ಆರ್ ನಗರ ತಾಲ್ಲೂಕು
ಮೈಸೂರು ಜಿಲ್ಲೆ.

**<u>ದೋಷಾರೋಪಣೆ</u>**

ಶ್ರೀ ಚಂದನ್.ಎಸ್ ಬಿ.ಕಾಮ್., ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿ ನಾಯಾಧೀಶರು, ಕೆ.ಆರ್.ನಗರ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಿಸುವುದೇನೆಂದರೆಃ

ದಿನಾಂಕಃ 22-01-2026 ರಂದು 16.20 ಗಂಟೆಯಿಂದ 17.50 ಗಂಟೆವರೆಗೆ ಆರೋಪಿಯಾದ ನೀವು ಯಾವುದೇ ಸರ್ಕಾರದ ರಹದಾರಿಯನ್ನು ಪಡೆಯದೇ ಇದೆ ಕೆ ಆರ್ ನಗರ ತಾಲ್ಲೂಕು ಸಿದ್ದಾಪುರ ಗ್ರಾಮದ ಗೇಟ್ ಬಳಿಯ ಸಾರ್ವಜನಿಕ ರಸ್ತೆಯಲ್ಲಿ ಕೈಯಲ್ಲಿ ಓರಿಜನ್ ಚಾಯ್ಸ 90 ಎಂ.ಐಐ ನ 7 ಮದ್ಯದ ಟೆಟ್ರಾ ಪ್ಯಾಕೆಟ್ ಹಾಗೂ 4 ಪ್ಲಾಸ್ಟಿಕ್ ಲೋಟ ಮತ್ತು ಒಂದು ಲೀಟರ್ ನೀರು ಇರುವ ಬಾಟಲ್ ನ್ನು ಹಿಡಿದುಕೊಂಡು ದಾರಿಯಲ್ಲಿ ಹೋಗುವ ಸಾರ್ವಜನಿಕರಿಗೆ ಮದ್ಯಪಾನ ಮಾಡುವಂತೆ ಪ್ರಚೋದನೆ ಮಾಡಿರುವುದು ತನಿಖೆಯಿಂದ ದೃಡಪಟ್ಟ ಮೇರೆಗೆ ಕರ್ನಾಟಕ ಅಬಕಾರಿ ಕಾಯ್ದೆ **ಕಲಂ-15(ಎ)** ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುವಿರಿ ಎಂದು ಆರೋಪಣೆ ಹೊರಿಸಲಾಗಿದೆ.

ಆದ್ದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಎದುರಿಸಬೇಕೆಂದು ನಿರ್ದೇಶಿಸುತ್ತೇನೆ.

ಪ್ರಃ 1) ಕನ್ನಡದಲ್ಲಿ ಓದಿ ಹೇಳಿದ ಮೇಲಿನ ದೋಷರೋಪಣೆ ಅರ್ಥವಾಯಿತೇ?
ಉಃ ಅರ್ಥವಾಯಿತು

ಪ್ರಃ 2) ಅಪರಾಧವನ್ನು ಒಪ್ಪಿಕೊಳ್ಳುವಿರೋ ಅಥವಾ ಸಾಕ್ಷಿಗಳ ವಿಚಾರಣೆಯಾಗ ಬಯಸುವಿರಾ?

ಉಃ ಒಪ್ಪಿಕೊಳ್ಳುತ್ತೇನೆ

**(ಆರೋಪಿತರ ವಿರುದ್ಧ ದೋಷಾರೋಪಣೆ ರಚಿಸಿ ನೇರವಾಗಿ ಓದಿ ತಿಳಿಸಿದ ನಂತರ ಅವರು ಕೊಟ್ಟ ಉತ್ತರವನ್ನೇ ಸರಿಯಾಗಿ ಪಡೆದುಕೊಳ್ಳಲಾಯಿತೆಂದು ದೃಢೀಕರಿಸಿದೆ.)**

(**ಚಂದನ್ ಎಸ್** )

ದಿನಾಂಕ ಃ 27.01.2026

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು, ಕೆ ಆರ್ ನಗರ.

**ಆರೋಪಿಯ ಸಹಿ ಃ**